# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಎಚ್.ರಸ್ತೆ, ತುಮಕೂರು-572 103, ☏ : 0816-2255650, 2273511 ಫ್ಯಾಕ್ಸ್ : 0816- 2270719

ಸಂಖ್ಯೆ:ತುವಿ: ಪ.ವಿ:ವಿ.ನಿ.-03:2020-21:/345 ದಿನಾಂಕ: 09.10.2020

## ಅಧಿಸೂಚನೆ

**ವಿಷಯ:** ಸ್ನಾತಕ ಶಿಕ್ಷಣ (B.Ed.) ಪದವಿ ಪರೀಕ್ಷೆಗಳ ಅಂತಿಮ ವೇಳಾಪಟ್ಟಿ, ಪರೀಕ್ಷಾ ಕೇಂದ್ರ ಘೋಷಣೆ ಮತ್ತು ಪರೀಕ್ಷಾ ಮುಖ್ಯ ಅಧೀಕ್ಷಕರು ಹಾಗೂ ಉಪ ಅಧೀಕ್ಷಕರುಗಳ ನೇಮಕಾತಿ ಕುರಿತು.

**ಉಲ್ಲೇಖ:** 1. UGC D.O.Letter No. F.1-1/2020(Secy), Dated:08.07.2020

2. Governement Order No. ED/197/UNE/2020, Bangalore, Dated:10.07.2020
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:08.10.2020

* * * * *

2020 ರ ಅಕ್ಟೋಬರ್ ಮಾಹೆಯಲ್ಲಿ ನಡೆಯಲಿರುವ ಸ್ನಾತಕ ಶಿಕ್ಷಣ (B.Ed) ಪದವಿಯ ಪ್ರಥಮ, ದ್ವಿತೀಯ, ತೃತೀಯ ಸೆಮಿಸ್ಟರ್ (Repeaters), ಮತ್ತು ನಾಲ್ಕನೇ ಸೆಮಿಸ್ಟರ್ (Freshers) ಪರೀಕ್ಷೆಗಳು ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅಂತಿಮ ಪರೀಕ್ಷಾ ವೇಳಾಪಟ್ಟಿಯಂತೆ ನಡೆಸಲಾಗುವುದು. ಈ ಕೆಳಕಂಡಂತೆ ಪರೀಕ್ಷಾ ಕೇಂದ್ರಗಳನ್ನು ಘೋಷಣೆ ಮಾಡಲಾಗಿರುತ್ತದೆ.

| ಕ್ರ.ಸಂ. | ಪರೀಕ್ಷಾ ಕೇಂದ್ರ | ಜೋಡಣೆ ಮಾಡಲಾದ ಕಾಲೇಜುಗಳು |
|---|---|---|
| 1. | ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು | 1A) ದಿಗ್ವಿಜಯ ಗ್ರಾಮೀಣ ಶಿಕ್ಷಣ ಮಹಾವಿದ್ಯಾಲಯ, ಹಡವನಹಳ್ಳಿ ಗೇಟ್. ತುರುವೇಕೆರೆ ತಾಲ್ಲೂಕು |
| | ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು (ಉಪ ಪರೀಕ್ಷಾ ಕೇಂದ್ರ) | 1B) ಭಾರತಿ ಶಿಕ್ಷಣ ಮಹಾವಿದ್ಯಾಲಯ, ತುಮಕೂರು<br>1C) ನಯಾಲ ಶಿಕ್ಷಣ ಮಹಾವಿದ್ಯಾಲಯ, ತುಮಕೂರು |
| 2. | ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ, ತುಮಕೂರು. | 2A) ಕೆ.ಎಸ್.ಇ.ಎಫ್ ಶಿಕ್ಷಣ ಮಹಾವಿದ್ಯಾಲಯ, ತುಮಕೂರು |
| 3. | ಎಸ್.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯ, ತುಮಕೂರು | - |
| 4. | ಶ್ರೀ ಕೃಷ್ಣ ಶಿಕ್ಷಣ ಮಹಾವಿದ್ಯಾಲಯ, ತುಮಕೂರು. | 4 A) ಅಕ್ಷಯ ಶಿಕ್ಷಣ ಮಹಾವಿದ್ಯಾಲಯ, ತುಮಕೂರು |
| 5. | ರಾಜೀವ್ ಗಾಂಧಿ ಶಿಕ್ಷಣ ಮಹಾವಿದ್ಯಾಲಯ, ತುಮಕೂರು | - |
| 6. | ಇಂದಿರಾ ಶಿಕ್ಷಣ ಮಹಾವಿದ್ಯಾಲಯ, ತುಮಕೂರು | 6 A) ದಿವ್ಯ ಶಿಕ್ಷಣ ಮಹಾವಿದ್ಯಾಲಯ, ತುಮಕೂರು |
| 7. | ಕಲ್ಪತರು ಶಿಕ್ಷಣ ಮಹಾವಿದ್ಯಾಲಯ, ತಿಪಟೂರು (ಕಲ್ಪತರು ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ ಕೊಠಡಿಗಳ ಜೋಡಣೆಯೊಂದಿಗೆ) | 7 A) ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ, ತಿಪಟೂರು |
| 8. | ಶ್ರೀ ಣಿ.ವಿ.ವಿ. ಶಿಕ್ಷಣ ಮಹಾವಿದ್ಯಾಲಯ, ಮಧುಗಿರಿ | - |
| 9. | ಆರ್. ಮುದ್ದುರಂಗೇಗೌಡ ಶಿಕ್ಷಣ ಮಹಾವಿದ್ಯಾಲಯ, ಶಿರಾ. | - |

(...2

ಪರೀಕ್ಷಾ ಕೇಂದ್ರಗಳನ್ನಾಗಿ ಘೋಷಿಸಲಾಗಿರುವ ಶಿಕ್ಷಣ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳನ್ನು ಆಯಾ ಪರೀಕ್ಷಾ ಕೇಂದ್ರಗಳ(ಉಪ ಪರೀಕ್ಷಾ ಕೇಂದ್ರಗಳಿಗೂ ಸೇರಿ) ಪರೀಕ್ಷಾ ಮುಖ್ಯ ಅಧೀಕ್ಷಕರು (Examination Chief Superintendent) ಗಳೆಂದು ನೇಮಕಾತಿ ಮಾಡಲಾಗಿದೆ ಹಾಗೂ ಹೆಚ್ಚುವರಿ ಮುಖ್ಯ ಅಧೀಕ್ಷಕರು(Additional Chief Superintendents) ಗಳನ್ನು ಈ ಕೆಳಗಿನಂತೆ ನೇಮಕಾತಿ ಮಾಡಲಾಗಿದೆ.

| ಕ್ರ.ಸಂ. | ಪರೀಕ್ಷಾ ಕೇಂದ್ರ | ಹೆಚ್ಚುವರಿ ಮುಖ್ಯ ಅಧೀಕ್ಷಕರು |
|---|---|---|
| 1. | ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು | - |
| | ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು (ಉಪ ಪರೀಕ್ಷಾ ಕೇಂದ್ರ) | ಪ್ರಾಂಶುಪಾಲರು, ಭಾರತಿ ಶಿಕ್ಷಣ ಮಹಾವಿದ್ಯಾಲಯ, ತುಮಕೂರು<br>ಪ್ರಾಂಶುಪಾಲರು, ನಯಾಲ ಶಿಕ್ಷಣ ಮಹಾವಿದ್ಯಾಲಯ, ತುಮಕೂರು |
| 2. | ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ, ತುಮಕೂರು. | - |
| 3. | ಎಸ್.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯ, ತುಮಕೂರು | - |
| 4. | ಶ್ರೀ ಕೃಷ್ಣ ಶಿಕ್ಷಣ ಮಹಾವಿದ್ಯಾಲಯ, ತುಮಕೂರು. | ಪ್ರಾಂಶುಪಾಲರು, ಅಕ್ಷಯ ಶಿಕ್ಷಣ ಮಹಾವಿದ್ಯಾಲಯ, ತುಮಕೂರು |
| 5. | ರಾಜೀವ್ ಗಾಂಧಿ ಶಿಕ್ಷಣ ಮಹಾವಿದ್ಯಾಲಯ, ತುಮಕೂರು | - |
| 6. | ಇಂದಿರಾ ಶಿಕ್ಷಣ ಮಹಾವಿದ್ಯಾಲಯ, ತುಮಕೂರು | ಪ್ರಾಂಶುಪಾಲರು, ದಿವ್ಯ ಶಿಕ್ಷಣ ಮಹಾವಿದ್ಯಾಲಯ, ತುಮಕೂರು |
| 7. | ಕಲ್ಪತರು ಶಿಕ್ಷಣ ಮಹಾವಿದ್ಯಾಲಯ, ತಿಪಟೂರು (ಕಲ್ಪತರು ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ ಕೊಠಡಿಗಳ ಜೋಡಣೆಯೊಂದಿಗೆ) | ಪ್ರಾಂಶುಪಾಲರು, ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ, ತಿಪಟೂರು |
| 8. | ಶ್ರೀ ಟಿ.ವಿ.ವಿ. ಶಿಕ್ಷಣ ಮಹಾವಿದ್ಯಾಲಯ, ಮಧುಗಿರಿ | |
| 9. | ಆರ್. ಮುದ್ದುರಂಗೇಗೌಡ ಶಿಕ್ಷಣ ಮಹಾವಿದ್ಯಾಲಯ, ಶಿರಾ. | - |

ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ ಉಪಅಧೀಕ್ಷಕರನ್ನು ನೇಮಿಸಿಕೊಂಡು ಅವರಿಗೆ ಪರೀಕ್ಷೆ ನಡೆಸುವಂತೆ ಸೂಚಿಸಬಾರದು. ಎಲ್ಲಾ ಪರೀಕ್ಷಾ ಕೇಂದ್ರಗಳ ಪರೀಕ್ಷಾ ಮುಖ್ಯ ಅಧೀಕ್ಷಕರುಗಳು/ ಹೆಚ್ಚುವರಿ ಮುಖ್ಯ ಅಧೀಕ್ಷಕರುಗಳು **ಕೋವಿಡ್- 19 ರ ಪ್ರಯುಕ್ತ, ಉಲ್ಲೇಖ 01 & 02 ರಲ್ಲಿ ಸೂಚಿಸಿರುವಂತೆ ಯು.ಜಿ.ಸಿ. ಮತ್ತು ಕರ್ನಾಟಕ ಸರ್ಕಾರದ ಪರೀಕ್ಷಾ ಮಾರ್ಗಸೂಚಿಗಳನುಸಾರವಾಗಿ ಪರೀಕ್ಷೆಗಳನ್ನು ನಡೆಸಲು ಕಡ್ಡಾಯವಾಗಿ ಅಗತ್ಯ ಕ್ರಮ ಕೈಗೊಂಡು ಪರೀಕ್ಷಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು.**

ಪರೀಕ್ಷಾ ಕಾರ್ಯಗಳಲ್ಲಿ ಏನಾದರೂ ಸಮಸ್ಯೆಗಳು ಉಂಟಾದಲ್ಲಿ ಕೂಡಲೇ **ಕುಲಸಚಿವರು (ಪರೀಕ್ಷಾಂಗ) ದೂರವಾಣಿ ಸಂಖ್ಯೆ: 9448801569, ಉಪಕುಲಸಚಿವರು (ಪರೀಕ್ಷಾಂಗ)- 9481266917 ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರುಗಳನ್ನು ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳುವುದು.

(...3

ಪರೀಕ್ಷಾ ಕೇಂದ್ರದ ಕಾಲೇಜುಗಳಿಗೆ ಜೋಡಣೆ ಮಾಡಲಾದ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ವಿದ್ಯಾರ್ಥಿಗಳ ಹಾಗೂ ಇನ್ನಿತರ ಮಾಹಿತಿಗಳನ್ನು ಪರೀಕ್ಷಾ ಮುಖ್ಯ ಅಧೀಕ್ಷಕರುಗಳಿಗೆ ಒದಗಿಸಬೇಕು ಮತ್ತು **ತಮ್ಮ ಕಾಲೇಜಿನ ಎಲ್ಲಾ ಅಧ್ಯಾಪಕರುಗಳನ್ನು ಪರೀಕ್ಷಾ ಕಾರ್ಯಗಳಿಗೆ ಕಡ್ಡಾಯವಾಗಿ ನಿಯೋಜಿಸಬೇಕು** ಹಾಗೂ ಪರೀಕ್ಷೆಗಳು ಸುಗಮವಾಗಿ ನಡೆಯಲು ಎಲ್ಲಾ ಸಹಕಾರಗಳನ್ನು ನೀಡತಕ್ಕದ್ದು. ತಪ್ಪಿದಲ್ಲಿ, ಮುಂದೆ ಆಗುವ ತೊಂದರೆಗಳಿಗೆ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳೇ ಹೊಣೆಗಾರರಾಗಿರುತ್ತಾರೆ.

ಪರೀಕ್ಷಾ ಮುದ್ರಣ ಸಾಮಾಗ್ರಿಗಳನ್ನು ಹೊರತು ಪಡಿಸಿ ಉಳಿದ ಪರೀಕ್ಷಾ ಲೇಖನ ಸಾಮಾಗ್ರಿಗಳನ್ನು ವಿದ್ಯಾರ್ಥಿಗಳಿಂದ ಪಡೆಯುವ ಅರ್ಜಿ ಪರಿಶೀಲನಾ ಶುಲ್ಕ (Scrutiny Fees) ರೂ. 10/- ರ ಶುಲ್ಕದಲ್ಲಿ ರೂ. 6.00 ನ್ನು ಉಪಯೋಗಿಸಿಕೊಳ್ಳುವುದು. ಉಳಿದ ರೂ 4.00 ನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯಕ್ಕೆ ಪಾವತಿಸುವುದು. ಪರೀಕ್ಷಾ ಕೇಂದ್ರಕ್ಕೆ ಜೋಡಣೆ ಮಾಡಲಾದ ಕಾಲೇಜಿನವರು ಸಂಬಂಧಿಸಿದ ಪರೀಕ್ಷಾ ಕೇಂದ್ರಕ್ಕೆ ಅರ್ಜಿ ಪರಿಶೀಲನಾ ಶುಲ್ಕವನ್ನು ಪಾವತಿಸುವುದು.

<u>ಪರೀಕ್ಷಾ ಮುಖ್ಯ ಅಧೀಕ್ಷಕರುಗಳಿಗೆ (Examination Chief Superintendent) ಸೂಚನೆಗಳು:</u>

1. ಪರೀಕ್ಷಾ ಮುಖ್ಯ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುವವರು ಪರೀಕ್ಷಾ ದಿನದಂದು ಪರೀಕ್ಷಾ ಸಮಯಕ್ಕಿಂತ ಒಂದು **ಗಂಟೆ ಮುಂಚಿತವಾಗಿ** ಕಾಲೇಜಿಗೆ ಬಂದು ಮೊಹರು ಮಾಡಿದ ಪ್ರಶ್ನೆ ಪತ್ರಿಕೆ ಲಕೋಟೆಯನ್ನು ತಮ್ಮ ಸಮ್ಮುಖದಲ್ಲೇ ತೆರೆದು ಪರೀಕ್ಷಾ ಕೊಠಡಿಗೆ ವಿತರಿಸುವ ವ್ಯವಸ್ಥೆ ಮಾಡಬೇಕು. ಮುಖ್ಯ ಅಧೀಕ್ಷಕರು ಇಲ್ಲದೆ ಇದ್ದಾಗ ಅನಧಿಕೃತವಾಗಿ ಬೇರೆ ಯಾರೂ ಕೂಡ ಪ್ರಶ್ನೆ ಪತ್ರಿಕೆಗಳ ಲಕೋಟೆಯನ್ನು ತೆರೆಯಬಾರದು ಒಂದು ವೇಳೆ ತೆರೆದಲ್ಲಿ ಮುಖ್ಯ ಅಧೀಕ್ಷಕರನ್ನೆ ಹೊಣೆಗಾರರನ್ನಾಗಿ ಮಾಡಲಾಗುವುದು.
2. ಪ್ರಾಂಶುಪಾಲರು ಕಾಲೇಜಿನ ಹಿರಿಯ ಅಧ್ಯಾಪಕರಿಗೆ ಮುಖ್ಯ ಅಧೀಕ್ಷಕರ ಜವಾಬ್ದಾರಿ ವಹಿಸಿ ಪರೀಕ್ಷಾ ಕಾರ್ಯದಿಂದ ಗೈರು ಹಾಜರಾಗುವುದು. ಪರೀಕ್ಷಾ ದಿನಗಳಂದು ತಡವಾಗಿ ಕಾಲೇಜಿಗೆ ಬರುವುದು, ಪರೀಕ್ಷಾ ದಿನಗಳಲ್ಲಿ ಪ್ರಶ್ನೆ ಪತ್ರಿಕೆ ವಿತರಿಸುವ ಜವಾಬ್ದಾರಿಯನ್ನು ಕಾಲೇಜಿನ ಅಧ್ಯಾಪಕರಿಗೆ ನಿರ್ವಹಿಸುವಂತೆ ಸೂಚಿಸಿ, ಪರೀಕ್ಷೆಗಳು ಮುಗಿಯುವುದಕ್ಕೆ ಮುಂಚಿತವಾಗಿ ಕಾಲೇಜಿನಿಂದ ಹೊರ ಹೋಗಬಾರದು.
3. ವಿದ್ಯಾರ್ಥಿಗಳು ಪರೀಕ್ಷಾ ಸಮಯದಲ್ಲಿ ಮೊಬೈಲ್ ಫೋನ್‌ಗಳನ್ನು ಉಪಯೋಗಿಸುವುದು / ಪ್ರದರ್ಶಿಸುವುದು ಹಾಗೂ ಕಾಲೇಜಿಗೆ ತರುವುದನ್ನು ನಿಷೇಧಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಈ ಅಧಿಸೂಚನೆಯೊಂದಿಗೆ ನೀಡಿರುವ ಸೂಚನೆಗಳನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು ಮತ್ತು ಈ ಬಗ್ಗೆ ಕ್ರಮವಹಿಸುವುದು.
4. ವಿದ್ಯಾರ್ಥಿಗಳಿಗೆ ಪರೀಕ್ಷಾ ಅವಧಿ ಮುಗಿಯುವವರೆಗೆ ಪ್ರಶ್ನೆ ಪತ್ರಿಕೆಗಳನ್ನು ಹೊರಗಡೆ ತೆಗೆದುಕೊಂಡು ಹೋಗಲು ನೀಡಬಾರದು.
5. ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಕೇಂದ್ರಕ್ಕೆ ಜೋಡಣೆ ಮಾಡಲಾದ ಕಾಲೇಜುಗಳ ಹಾಗೂ ಪರೀಕ್ಷಾ ಕೇಂದ್ರದಲ್ಲಿರುವ ಖಾಯಂ ಅಧ್ಯಾಪಕರುಗಳನ್ನೇ ಕಡ್ಡಾಯವಾಗಿ ಬಳಸಿಕೊಳ್ಳುವುದು. ಅಗತ್ಯವಿದ್ದಲ್ಲಿ ಮಾತ್ರ ಅತಿಥಿ ಉಪನ್ಯಾಸಕರುಗಳನ್ನು ಬಳಸಿಕೊಳ್ಳುವುದು.
6. ಜಾಗೃತದಳದವರು ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿದಾಗ ಕುಲಸಚಿವರು(ಪರೀಕ್ಷಾಂಗ) ಇವರ ಆದೇಶದಂತೆ ಕಾರ್ಯ ನಿರ್ವಹಿಸುತ್ತಾರೆ, ಅವರಿಗೆ ಸಂಪೂರ್ಣ ಸಹಕಾರ ನೀಡುವುದು ಮುಖ್ಯ ಅಧೀಕ್ಷಕರು ಹಾಗೂ ಕಾಲೇಜಿನ ಅಧ್ಯಾಪಕರ ಜವಾಬ್ದಾರಿಯಾಗಿರುತ್ತದೆ.
7. ಯಾವುದೇ ಕಾರಣಕ್ಕೂ ಪರೀಕ್ಷಾ ಅಕ್ರಮಗಳು ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಮತ್ತು ಪರೀಕ್ಷಾ ಪಾವಿತ್ರತೆಯನ್ನು ಕಾಪಾಡುವುದು ತಮ್ಮ ಹೊಣೆಗಾರಿಕೆಯಾಗಿರುತ್ತದೆ.
8. Question Paper Code ಗೆ ಅನುಸಾರವಾಗಿ ಉತ್ತರ ಪತ್ರಿಕೆ ಪುಸ್ತಕಗಳನ್ನು Room Superintendents Invigilation Dairy ಯೊಂದಿಗೆ ಪ್ಯಾಕ್ ಮಾಡುವುದು ಹಾಗೂ ಆ ಪ್ಯಾಕ್‌ನ ಮೇಲೆ ದಿನಾಂಕ, ವಿಷಯ, ಕಾಲೇಜಿನ ಕೋಡ್, ಕಾಲೇಜಿನ ಹೆಸರು ಮತ್ತು ವಿಳಾಸ, Question Paper Codeನ್ನು ಹಾಗೂ ಬಂಡಲ್‌ನಲ್ಲಿರುವ ಒಟ್ಟು ಉತ್ತರ ಪತ್ರಿಕೆಗಳ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು.

(...4

9. ಪ್ರಶ್ನೆ ಪತ್ರಿಕೆಗಳು ಯಾವ ಕಾರಣಕ್ಕೂ ಪರೀಕ್ಷೆಯ ಸಮಯಕ್ಕಿಂತ ಮುಂಚೆ ಬಹಿರಂಗಗೊಳ್ಳದಂತೆ ಪ್ರಾಂಶುಪಾಲರು/ಮುಖ್ಯ ಅಧೀಕ್ಷಕರು ಸುರಕ್ಷಿತವಾಗಿ ಸಂರಕ್ಷಿಸುವುದು, ಗೌಪ್ಯತೆ ಕಾಪಾಡುವುದಕ್ಕೆ ಮೊದಲ ಆದ್ಯತೆ ನೀಡಲು ತಿಳಿಸಿದೆ.

10. ಪ್ರಾಂಶುಪಾಲರುಗಳು ಪರೀಕ್ಷಾ ದಿನಗಳಲ್ಲಿ ಸಾಂದರ್ಭಿಕ ರಜೆ/ ಇತರೆ ರಜೆ ಮೇಲೆ ತೆರಳುವ ಸಂದರ್ಭದಲ್ಲಿ ಕುಲಸಚಿವರು(ಮೌಲ್ಯಮಾಪನ) ಇವರಿಗೆ ಮಾಹಿತಿ ನೀಡುವುದು.

11. ಹಲವು ರೀತಿಯ ಮುನ್ಸೂಚನೆಗಳನ್ನು ನೀಡಿರುವ ಹೊರತಾಗಿಯು ಪರೀಕ್ಷಾ ಕೊಠಡಿಗಳಲ್ಲಿ ಕೊಠಡಿ ಮೇಲ್ವಿಚಾರಕರು ಪರೀಕ್ಷೆ ನಡೆಯುತ್ತಿರುವ ಸಂದರ್ಭಗಳಲ್ಲಿ ಮೊಬೈಲ್ ದೂರವಾಣಿ ಅಥವಾ ಇನ್ನಿತರ ಯಾವುದೇ ಸಂವಹನ ತಂತ್ರಜ್ಞಾನ ಬಳಸುವುದು, ಪುಸ್ತಕಗಳನ್ನು ಓದುವುದು, ಪಕ್ಕದ ಕೊಠಡಿ ಮೇಲ್ವಿಚಾರಕರೊಂದಿಗೆ ಮಾತನಾಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಹಾಗೂ ಈ ಬಗ್ಗೆ ಜಾಗೃತ ದಳದವರು ನೀಡುವ ವರದಿಯನ್ನು ವಿಶ್ವವಿದ್ಯಾನಿಲಯವು ಗಂಭೀರವಾಗಿ ಪರಿಗಣಿಸುತ್ತದೆ. ಮೇಲ್ಕಂಡ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ಎಲ್ಲಾ ಕೊಠಡಿ ಮೇಲ್ವಿಚಾರಕರ ಮತ್ತು ಅಧ್ಯಾಪಕರುಗಳ ಗಮನಕ್ಕೆ ತರಲು ಸೂಚಿಸಿದೆ.

12. ಪರೀಕ್ಷೆ ನಡೆಯುವ ಕಾಲೇಜುಗಳಲ್ಲಿ ಶುದ್ಧೀಕರಿಸಿದ ಕುಡಿಯುವ ನೀರಿನ ವ್ಯವಸ್ಥೆಯನ್ನು ಪರೀಕ್ಷೆಗಳು ಮುಗಿಯುವ ತನಕ ಕಡ್ಡಾಯವಾಗಿ ಪೂರೈಸುವುದು.

**ಹೆಚ್ಚುವರಿ ಮುಖ್ಯ ಅಧೀಕ್ಷಕರು (Additional Chief Superintendent) ಗಳ ಕರ್ತವ್ಯಗಳು:-**

1. ಪರೀಕ್ಷಾ ಮುಖ್ಯ ಅಧೀಕ್ಷಕರ ಸೂಚನೆಯಂತೆ, ಪರೀಕ್ಷೆಗಳನ್ನು ಪಾರದರ್ಶಕತೆಯಿಂದ ನಿಯಮಾನುಸಾರ, ಕ್ರಮಬದ್ಧವಾಗಿ ನಡೆಯಲು ಸಂಪೂರ್ಣ ಸಹಕಾರ ನೀಡುವುದು.
2. ಪ್ರಶ್ನೆ ಪತ್ರಿಕೆಗಳ ಪ್ಯಾಕೆಟ್‌ಗಳನ್ನು ಮುಖ್ಯ ಅಧೀಕ್ಷಕರು Open ಮಾಡುವ ಸಂದರ್ಭದಲ್ಲಿ ಹಾಜರಿದ್ದು, ಪ್ರಶ್ನೆ ಪತ್ರಿಕೆಗಳ ಪ್ಯಾಕೆಟ್‌ಗಳು ಸುರಕ್ಷಿತವಾಗಿ ಸಂರಕ್ಷಿಸಲ್ಪಟ್ಟಿವೆಯೇ ಎಂಬುದನ್ನು ದೃಢೀಕರಿಸಿಕೊಂಡು Question Paper Packet Opening Certificate ನಮೂನೆಯಲ್ಲಿ ಕಡ್ಡಾಯವಾಗಿ ಸಹಿ ಮಾಡಲೇಬೇಕು ಹಾಗೂ ಪರೀಕ್ಷೆಗಳು ಪೂರ್ಣಗೊಂಡ ನಂತರ ಕುಲಸಚಿವ (ಮೌ) ರವರಿಗೆ Spiral Binding ಮಾಡಿಸಿ ಸಲ್ಲಿಸುವುದು.
3. ಮುಖ್ಯ ಅಧೀಕ್ಷಕರು/ ಪ್ರಾಂಶುಪಾಲರು ಅನಿವಾರ್ಯ ಕಾರಣಗಳಿಂದ ರಜೆ ಮೇಲೆ ತೆರಳುವ ಸಂದರ್ಭದಲ್ಲಿ ಮಾತ್ರ, ಕುಲಸಚಿವರು (ಪರೀಕ್ಷಾಂಗ) ಇವರಿಗೆ ಮಾಹಿತಿ ನೀಡಿ, ಪರೀಕ್ಷಾ ಮುಖ್ಯ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುವುದು.
4. ಪರೀಕ್ಷಾ ಅಕ್ರಮಗಳು ನಡೆಯದಂತೆ ನೋಡಿಕೊಳ್ಳುವಲ್ಲಿ ಹೆಚ್ಚುವರಿ ಮುಖ್ಯ ಅಧೀಕ್ಷಕರು ದಕ್ಷತೆಯಿಂದ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸಬೇಕು.

**ಪ್ರಶ್ನೆ ಪತ್ರಿಕೆಗಳನ್ನು ಸ್ವೀಕರಿಸುವ ಬಗ್ಗೆ ಸೂಚನೆಗಳು:**

ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷೆ ನಡೆಯುವ ದಿನದಂದೇ ಆಯಾ ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲಾಗುವುದು. ಆ ಪ್ರಶ್ನೆ ಪತ್ರಿಕೆಗಳ ಪ್ಯಾಕೆಟ್‌ಗಳನ್ನು ಪ್ರಾಂಶುಪಾಲರು/ಪರೀಕ್ಷಾ ಮುಖ್ಯ ಅಧೀಕ್ಷಕರು ಖುದ್ದಾಗಿ ಪಡೆದು ಕೊಳ್ಳುವುದು.

**ಉತ್ತರ ಪತ್ರಿಕೆಗಳನ್ನು ರವಾನಿಸುವ ಬಗ್ಗೆ ಸೂಚನೆಗಳು:**

ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ವಿಶ್ವವಿದ್ಯಾನಿಲಯದಿಂದ ಅಧಿಕೃತವಾಗಿ ನಿಯೋಜಿಸಲ್ಪಟ್ಟವರಿಗೆ ಪರೀಕ್ಷೆ ಮುಗಿದ ತಕ್ಷಣ ಪ್ರಾಂಶುಪಾಲರು/ಪರೀಕ್ಷಾ ಮುಖ್ಯ ಅಧೀಕ್ಷಕರು ಸೂಕ್ತ ವಿವರಗಳೊಂದಿಗೆ ನೀಡುವುದು.

(....5

**ವಿಶೇಷ ಸೂಚನೆ:**

1. ಈ ಅಧಿಸೂಚನೆಯೊಂದಿಗೆ ಲಗತ್ತಿಸಲಾಗಿರುವ ಸೂಚನಾ ಪತ್ರವನ್ನು ಕಡ್ಡಾಯವಾಗಿ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು ಮತ್ತು ಸದರಿ ಮಾಹಿತಿಯನ್ನು ಪರೀಕ್ಷೆ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಕಡ್ಡಾಯವಾಗಿ ಪರೀಕ್ಷಾ ಕೊಠಡಿಯೊಳಗೆ ವಿದ್ಯಾರ್ಥಿಗಳಿಗೆ ಓದಿ ಹೇಳತಕ್ಕದ್ದು.
2. ಪರೀಕ್ಷೆಗಳಿಗೆ 36 ಪುಟಗಳುಳ್ಳ ಮುಖ್ಯ ಉತ್ತರ ಪುಸ್ತಕಗಳನ್ನು ಮಾತ್ರ ಕಡ್ಡಾಯವಾಗಿ ಬಳಸುವುದು. ಹೆಚ್ಚುವರಿ ಉತ್ತರ ಪುಸ್ತಕಗಳನ್ನು ಬಳಸುವಂತಿಲ್ಲ.
3. ಕೊರೊನಾ ಪಾಸಿಟಿವ್ ಬಂದ ವಿದ್ಯಾರ್ಥಿಗಳಿಗೆ ಪ್ರಸ್ತುತ ನಡೆಯುತ್ತಿರುವ ಪರೀಕ್ಷಾ ವೇಳಾಪಟ್ಟಿಯಂತೆ ಸದರಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲು ಕಷ್ಟಸಾಧ್ಯ. ಇನ್ನುಳಿದ ವಿದ್ಯಾರ್ಥಿಗಳ ಹಾಗೂ ಬೋಧಕ ಮತ್ತು ಬೋಧಕೇತರರುಗಳ ಹಿತದೃಷ್ಟಿಯಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಕೊರೊನಾ ಪಾಸಿಟಿವ್ ಇರುವ ವಿದ್ಯಾರ್ಥಿಗಳಿಗೆ ಅವರು ಗುಣಮುಖರಾದ ನಂತರ ಮುಂದಿನ ದಿನಗಳಲ್ಲಿ ಪ್ರತ್ಯೇಕವಾಗಿ ಪರೀಕ್ಷೆಯನ್ನು ನಡೆಸಲಾಗುವುದು.
4. ಕೋವಿಡ್–19 ರ ಪ್ರಯುಕ್ತ, ಈ ಅಧಿಸೂಚನೆಯೊಂದಿಗೆ ನೀಡಲಾಗಿರುವ ಸುತ್ತೋಲೆಯಲ್ಲಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವುದು.

**ಮೇಲ್ಕಂಡ ಎಲ್ಲಾ ವಿಷಯಗಳು ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು ಮತ್ತು ಪರೀಕ್ಷೆಗಳು ಸುಗಮವಾಗಿ ನಡೆಯಲು ಕ್ರಮಕೈಗೊಳ್ಳುವುದು.**

**ಆದೇಶದ ಮೇರೆಗೆ,**

9/10/2020

ಕುಲಸಚಿವರು (ಪರೀಕ್ಷಾಂಗ)

**ಗೆ, ಪ್ರಾಂಶುಪಾಲರು, ಸಂಯೋಜಿತ ಸ್ನಾತಕ ಶಿಕ್ಷಣ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

**ಪ್ರತಿಗಳು:**

1. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಉಪಕುಲಸಚಿವರು (ಶೈಕ್ಷಣಿಕ ವಿಭಾಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಫಲಿತಾಂಶ ಗಣಕೀಕರಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಆಪ್ತ ಸಹಾಯಕರು, ಕುಲಸಚಿವ(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
7. ಕಛೇರಿ ಪ್ರತಿ.

# TUMKUR UNIVERSITY

Pareeksha Bhavan, B.H. Road, Tumakuru– 572103, Phone: 0816- 2255650, 2273511 Fax: 0816-2270719

No.TU.:Exam:UG-TT:2020-21 : 345(A) Date: 09.10.2020

The Final Time Table of IV Semester (CBCS-Fresher's) B.Ed. Examination
October-2020

| Date & Day | Time | Subjects |
|---|---|---|
| 19.10.2020 Monday | 10.00 AM to 01.00 PM | Gender, School & Society |
| 20.10.2020 Tuesday | 10.00 AM to 11.30 AM | Advanced Pedagogy on Specific Subject of Study - Kannada, English, Sanskrit, Hindi & Urdu |
| 21.10.2020 Wednesday | 10.00 AM to 11.30 AM | Advanced Pedagogy on Specific Subject of Study- Physics, Biology, History & Commerce |
| 22.10.2020 Thursday | 10.00 AM to 11.30 AM | Advanced Pedagogy on Specific Subject of Study- Mathematics, Geography & Chemistry |
| 23.10.2020 Friday | 10.00 AM to 01.00 PM | Educational Administration & Management |

The Final Time Table of II Semester (CBCS- Repeaters) B.Ed. Examination
October-2020

| Date & Day | Time | Subjects |
|---|---|---|
| 19.10.2020 Monday | 02.00 PM to 05.00 PM | Learning, Teaching & Assessment |
| 20.10.2020 Tuesday | 02.00 PM to 05.00 PM | Knowledge and Curriculum |
| 21.10.2020 Wednesday | 02.00 PM to 05.00 PM | Contemporary Education in India |
| 22.10.2020 Thursday | 02.00 PM to 05.00 PM | Techniques, Methods & Approaches of Pedagogy |

9/10/2020

Registrar (Evaluation)

# TUMKUR UNIVERSITY

Pareeksha Bhavan, B.H. Road, Tumakuru – 572103, Phone: 0816- 2255650, 2273511 Fax: 0816-2270719

No.TU.:Exam:UG-TT:2020-21 : 345(B) Date: 09.10.2020

The Final Time Table of I Semester (CBCS- Repeaters) B.Ed. Examination
October-2020

| Date & Day | Time | Subjects |
|---|---|---|
| 19.10.2020 Monday | 10.00 AM to 11.30 AM | UDP of Language |
| 20.10.2020 Tuesday | 10.00 AM to 11.30 AM | UDP of Mathematics |
| 21.10.2020 Wednesday | 10.00 AM to 11.30 AM | UDP of Social Science / UDP of Science/ UDP of Commerce |
| 22.10.2020 Thursday | 10.00 AM to 01.00 PM | Childhood and Adolescence |
| 23.10.2020 Friday | 10.00 AM to 01.00 PM | Philosophical and Sociological Basis of Education |
| 24.10.2020 Saturday | 10.00 AM to 01.00 PM | Educational Technology |

The Final Time Table of III Semester (CBCS-Repeaters)
B.Ed. Examination October-2020

| Date & Day | Time | Subjects |
|---|---|---|
| 19.10.2020 Monday | 02.00 PM to 05.00 PM | Inclusive Education |
| 20.10.2020 Tuesday | 02.00 PM to 05.00 PM | Educational Evaluation |
| 21.10.2020 Wednesday | 02.00 PM to 05.00 PM | Guidance and Counseling / Value Education |
| 22.10.2020 Thursday | 02.00 PM to 03.30 PM | Pedagogy of School Subject – History, Mathematics, Biology |
| 23.10.2020 Friday | 02.00 PM to 03.30 PM | Pedagogy of School Subject – Kannada, English, Sanskrit, Hindi, Urdu |
| 24.10.2020 Saturday | 02.00 PM to 03.30 PM | Pedagogy of School Subject – Commerce, Chemistry, Geography, Physics |

9/10/20

Registrar (Evaluation)

E\Bhuvana\UG-T.T.-Nov/Dec10\Bed I & II Sem

ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103, ☎ : 0816-2255650, 2273511 ಫ್ಯಾಕ್ಸ್ : 0816- 2270719

## ಸೂಚನಾ ಫಲಕಕ್ಕೆ ಕಡ್ಡಾಯವಾಗಿ

1. ಕೋವಿಡ್-19 ರ ಪ್ರಯುಕ್ತ, ವಿದ್ಯಾರ್ಥಿಗಳು ಪರೀಕ್ಷೆಗೆ ಆಗಮಿಸುವಾಗ ಕಡ್ಡಾಯವಾಗಿ ಮಾಸ್ಕ್ ಹಾಗೂ ಸ್ಯಾನಿಟೈಸರ್ ಬಳಸುವುದು ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಹಾಗೂ ಶುದ್ಧ ಕುಡಿಯುವ ನೀರನ್ನು ತಮ್ಮ ಮನೆಯಿಂದಲೇ ತರುವುದು.
2. ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಯಲ್ಲಿ ಯಾವುದೇ ರೀತಿಯ ಹೆಸರು, ಗುರುತು, ಚಿಹ್ನೆ ಅಥವಾ ಸಂಕೇತಗಳನ್ನು ಬರೆಯಬಾರದು. ಬರೆದಿರುವುದು ಕಂಡುಬಂದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಅಕ್ರಮ ಚಟುವಟಿಕೆಯೆಂದು ಪರಿಗಣಿಸಿ ಅದನ್ನು ಮೌಲ್ಯಮಾಪನ ಕಾರ್ಯದಿಂದ ಹೊರಗಿಡಲಾಗುವುದು.
3. ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿಯೊಳಗೆ ಮೊಬೈಲ್‌ಗಳನ್ನು ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.
4. ವಿದ್ಯಾರ್ಥಿಗಳು ಪರೀಕ್ಷಾ ಅವಧಿ ಮುಗಿಯುವವರೆಗೆ ಪ್ರಶ್ನೆ ಪತ್ರಿಕೆಗಳನ್ನು ಕೊಠಡಿಯಿಂದ ಹೊರಗಡೆ ತೆಗೆದುಕೊಂಡು ಹೋಗುವಂತಿಲ್ಲ.

ಆದೇಶದ ಮೇರೆಗೆ

9/10/20

ಕುಲಸಚಿವರು (ಪರೀಕ್ಷಾಂಗ)

# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ,ತುಮಕೂರು-572 103☎:0816 - 2255650,2273511 ಫ್ಯಾಕ್ಸ್ : 0816-2270719

ಸಂಖ್ಯೆ:ತುವಿ: ಪ.ವಿ:ವಿ.ನಿ.-03:2020-21: 1348 ದಿನಾಂಕ: 09.10.2020

"ತುರ್ತು"

## ಸುತ್ತೋಲೆ

ವಿಷಯ: ಪರೀಕ್ಷಾ ಮುಂಜಾಗ್ರತ ಕ್ರಮ ವಹಿಸುವ ಕುರಿತು.

ಉಲ್ಲೇಖ: 1. UGC D.O.Letter No. F.1-1/2020(Secy), Dated:08.07.2020

2. Governement Order No. ED/197/UNE/2020, Bangalore, Dated:10.07.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್– 19 ರ ಪ್ರಯುಕ್ತ, ಅಕ್ಟೋಬರ್ 2020 ರಲ್ಲಿ ನಡೆಯಲಿರುವ ವಿವಿಧ ಸ್ನಾತಕ ಶಿಕ್ಷಣ ಪದವಿ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಲು ಉಲ್ಲೇಖ (01,02) ನ್ನು ತಮ್ಮ ಅವಗಾಹನೆಗೆ ತರುತ್ತಾ, ಈ ಕೆಳಕಂಡ ಪರೀಕ್ಷಾ ಮುಂಜಾಗ್ರತ ಕ್ರಮಗಳನ್ನು ವಹಿಸಲು ತಮಗೆ ಈ ಮೂಲಕ ಸೂಚಿಸಲಾಗಿದೆ.

- ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಯಾವ ಸ್ಥಳದಿಂದ ಬರುತ್ತಾರೆ ಎಂಬ ಮಾಹಿತಿಯನ್ನು ಪಡೆದುಕೊಳ್ಳುವುದು.
- ಸೈದ್ಧಾಂತಿಕ ಪರೀಕ್ಷೆಗಳು ನಡೆಯುವ ಸೂಕ್ತ ವಿವರಗಳೊಂದಿಗೆ ತಮ್ಮ ತಾಲ್ಲೂಕಿನ ಕೋವಿಡ್–19 ಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಮತ್ತು ವೈದ್ಯಾಧಿಕಾರಿಗಳಿಗೆ ಮಾಹಿತಿಯನ್ನು ನೀಡಿ ಅಗತ್ಯ ಮುಂಜಾಗ್ರತ ಕ್ರಮ ವಹಿಸಿ ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಮೂಲಕ ಕೋರಲಾಗಿದೆ. ಹಾಗೂ ತಮ್ಮ ಕಾಲೇಜಿಗೆ ಕೋವಿಡ್– 19 ರ ಉಸ್ತುವಾರಿ ಅಧ್ಯಾಪಕರನ್ನು ನೇಮಕಾತಿ ಮಾಡಿ, ಸದರಿ ಅಧ್ಯಾಪಕರ ವಿವರ ಹಾಗೂ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್‌ನ್ನು ಕಾಲೇಜಿನಲ್ಲಿ ಪ್ರಕಟಿಸುವುದು ಮತ್ತು ಸದರಿ ಮಾಹಿತಿಯನ್ನು ವಿಶ್ವವಿದ್ಯಾನಿಲಯಕ್ಕೆ ಇ–ಮೇಲ್ ಮತ್ತು ಹಾರ್ಡ್ ಕಾಪಿ ಮೂಲಕ ತುರ್ತಾಗಿ ಸಲ್ಲಿಸುವುದು.
- ಪರೀಕ್ಷೆಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಪರೀಕ್ಷಾ ಕೇಂದ್ರಗಳಲ್ಲಿ ಆಗಮಿಸುವ ಮತ್ತು ನಿರ್ಗಮಿಸುವ ದ್ವಾರಗಳಲ್ಲಿಯೇ ಕಡ್ಡಾಯವಾಗಿ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಥರ್ಮಲ್ ಸ್ಕ್ಯಾನಿಂಗ್ ಮಾಡುವುದು. ಆದ್ದರಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಪ್ರಾರಂಭವಾಗುವುದಕ್ಕಿಂತ ಒಂದು ಗಂಟೆ ಮುಂಚಿತವಾಗಿಯೇ ಪರೀಕ್ಷಾ ಕೇಂದ್ರದಲ್ಲಿ ಹಾಜರಿರುವಂತೆ ಸೂಚಿಸುವುದು.
- ಪರೀಕ್ಷಾ ಕೇಂದ್ರಗಳಲ್ಲಿ ಆಗಮಿಸುವ ಮತ್ತು ನಿರ್ಗಮಿಸುವ ಸಮಯದಲ್ಲಿ ಜನಸಂದಣಿಯಾಗದಂತೆ ಕ್ರಮವಹಿಸುವುದು.
- ವಿದ್ಯಾರ್ಥಿಗಳು ಕೋವಿಡ್–19 ಪರೀಕ್ಷೆ ಮಾಡಿಸಿ ನೆಗೆಟಿವ್ ವರದಿ ಇದ್ದರೆ ಒಳ್ಳೆಯದು.
- ಸಾಧಾರಣಕ್ಕಿಂತ ಹೆಚ್ಚು ದೇಹದ ಉಷ್ಣಾಂಶ, ಜ್ವರ ಮತ್ತು ಕೆಮ್ಮು ಇರುವಂತಹ ವಿದ್ಯಾರ್ಥಿಗೆ ಪ್ರತ್ಯೇಕ ಕೊಠಡಿಯಲ್ಲಿ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡುವುದು ಮತ್ತು ಆ ವಿದ್ಯಾರ್ಥಿಗೆ ಕೋವಿಡ್–19 ಉಸ್ತುವಾರಿ ಸಮಾಲೋಚಕರಿಂದ ಮಾನಸಿಕವಾಗಿ ಧೈರ್ಯ ತುಂಬಿ ಪರೀಕ್ಷೆಯನ್ನು ಬರೆಯಲು ಅವಕಾಶ ಕಲ್ಪಿಸುವುದು.

( 2 ನೇ ಪುಟಕ್ಕೆ)

- ಆರೋಗ್ಯದ ದೃಷ್ಟಿಯಿಂದ ವಿದ್ಯಾರ್ಥಿಗಳು ನೀರಿನ ಬಾಟಲ್‌ನ್ನು ಮನೆಯಿಂದ ತರುವುದು.
- ವಿದ್ಯಾರ್ಥಿಗಳು ಮತ್ತು ಪರೀಕ್ಷಾ ಸಿಬ್ಬಂದಿ ಸ್ವಚ್ಛವಾದ ಮಾಸ್ಕನ್ನು ಧರಿಸುವುದು (ಮೂಗು ಮತ್ತು ಬಾಯಿ ಮುಚ್ಚುವಂತಿರಬೇಕು) ಹಾಗೂ ಒಂದು ಸ್ವಚ್ಛವಾದ ಕರವಸ್ತ್ರವನ್ನು ತರುವುದು. ಒಂದು ವೇಳೆ ಮಾಸ್ಕನ್ನು ಧರಿಸದಿದ್ದಲ್ಲಿ ಕಾಲೇಜಿನಿಂದ ವಿದ್ಯಾರ್ಥಿಗಳಿಗೆ ಮಾಸ್ಕಗಳನ್ನು ವಿತರಿಸುವುದು.
- ವಿದ್ಯಾರ್ಥಿಗಳಿಗೆ ಅಂತರವನ್ನು ಕಾಪಾಡಿಕೊಂಡು ಡೆಸ್ಕ್‌ಗೆ ಒಬ್ಬರಂತೆ ಜಿಗ್-ಜಾಗ್ ಮಾದರಿಯಲ್ಲಿ ಆಸನದ ವ್ಯವಸ್ಥೆಯನ್ನು ಮಾಡುವುದು.
- ಪ್ರವೇಶ ದ್ವಾರ, ಕೊಠಡಿಗಳಿಗೆ ಕಡ್ಡಾಯವಾಗಿ ಸ್ಯಾನಿಟೈಸರ್ (ಡೆಸ್ಕ್ & ಚೇರ್ ಸೇರಿದಂತೆ) ಮತ್ತು ಶೌಚಾಲಯಗಳು ಸ್ವಚ್ಛವಾಗಿರಿಸಿ ಸ್ಯಾನಿಟೈಸರ್ ಮಾಡುವುದು
- ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ಹ್ಯಾಂಡ್ ಸ್ಯಾನಿಟೈಸರ್ ಉಪಯೋಗಿಸುವುದು.
- ಸಿಬ್ಬಂದಿಗಳಿಗೆ ಹ್ಯಾಂಡ್ ಸ್ಯಾನಿಟೈಸರ್ ಮತ್ತು ಗ್ಲೌಸ್ ಉಪಯೋಗಿಸಲು ಸೂಚಿಸುವುದು
- **ಪರೀಕ್ಷಾ ಕಾರ್ಯದಲ್ಲಿ ಭಾಗವಹಿಸುವ ಎಲ್ಲಾ ಅಧಿಕಾರಿಗಳು / ಸಿಬ್ಬಂದಿಗಳು ಅರೋಗ್ಯ ಸೇತು ಆ್ಯಪ್‌ನ್ನು ಕಡ್ಡಾಯವಾಗಿ ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಯು.ಜಿ.ಸಿ., ಕರ್ನಾಟಕ ಸರ್ಕಾರ ಮತ್ತು ವಿಶ್ವವಿದ್ಯಾನಿಲಯದ ಕೋವಿಡ್-19 ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವುದು ತಪ್ಪಿದಲ್ಲಿ ವಿಶ್ವವಿದ್ಯಾನಿಲಯದ ನಿಯಮಾನುಸಾರ ಕ್ರಮಕ್ಕೈಗೊಳ್ಳಲಾಗುವುದು.**
- ಕೋವಿಡ್-19 ನ ಮುಂಜಾಗ್ರತ ಕ್ರಮಗಳನ್ನು (ಮಾಸ್ಕ್, ಸ್ಯಾನಿಟೈಸರ್, ಸಾಮಾಜಿಕ ಅಂತರ, ಥರ್ಮಲ್ ಸ್ಕ್ಯಾನಿಂಗ್, ನೀರಿನ ವ್ಯವಸ್ಥೆ) ಮಾಹಿತಿಗಾಗಿ ಸೂಚನಫಲಕಗಳಲ್ಲಿ ಪ್ರಕಟಿಸುವುದು.
- **ಪರೀಕ್ಷಾ ಕೇಂದ್ರಗಳಿಗೆ ಜೋಡಣೆ ಮಾಡಲಾದ ಕಾಲೇಜಿನವರು ತಮ್ಮ ವಿದ್ಯಾರ್ಥಿಗಳ ಆರೋಗ್ಯ ಮತ್ತು ಪರೀಕ್ಷಾ ಮುಂಜಾಗ್ರತ ಕ್ರಮಗಳನ್ನು ವಹಿಸಿ ಪರೀಕ್ಷಾ ಕೇಂದ್ರದವರಿಗೆ ಸಂಪೂರ್ಣ ಸಹಕಾರ ನೀಡಲು ಸೂಚಿಸಲಾಗಿದೆ.**

**ಆದೇಶದ ಮೇರೆಗೆ,**

7/10/2020

**ಕುಲಸಚಿವರು (ಪರೀಕ್ಷಾಂಗ)**

ಗೆ,

1. ಪ್ರಾಂಶುಪಾಲರು, ಸಂಯೋಜಿತ ಸ್ನಾತಕ ಶಿಕ್ಷಣ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಪ್ರತಿಗಳು:

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಯವರ ಆಪ್ತ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಕಛೇರಿ ಪ್ರತಿ.